**ದಿನಾಂಕಃ 26.02.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.**

**ಪಾಟೀಸವಾಲುಃ ಶ್ರೀ.ಎಸ್.ಕೆ ವಕೀಲರಿಂದ ಆರೋಪಿಯ ಪರವಾಗಿ.**

ನಾನು ಹತ್ತನೇ ತರಗತಿವರೆಗೆ ಓದಿದ್ದೇನೆ. ನಾನು ಮನೆಗಳನ್ನು ಕಟ್ಟುವ ಕೆಲಸ ಮಾಡುತ್ತಿದ್ದೇನೆ. ಸದರಿ ವ್ಯವಹಾರ ಮಾಡಲು ನನಗೆ ಯಾವುದೇ ಪರವಾನಿಗೆ ಇರುವುದಿಲ್ಲ. ಇದರಲ್ಲದೆ ಬೇರೆ ಯಾವುದೇ ವೃತ್ತಿ ಮಾಡುವುದಿಲ್ಲ. ನನ್ನ ಜೀವನಕ್ಕಾಗಿ ಮನೆ ಕಟ್ಟುವ ಕೆಲಸ ಬಿಟ್ಟು ಬೇರೆ ಯಾವುದೇ ಆದಾಯ ಇರುವುದಿಲ್ಲ.

2. ನನ್ನ ಹೆಸರಿನಲ್ಲಿ ಕೋಟಕ್ ಮಹೇಂದ್ರ ಬ್ಯಾಂಕ್ ಮತ್ತು ಐಸಿಐಸಿಐ ಬ್ಯಾಂಕ್‌ನಲ್ಲಿ ಖಾತೆಗಳು ಇದ್ದು, ಎರಡು ಕೂಡ ಕಮ್ಮನಹಳ್ಳಿಯಲ್ಲಿ ಶಾಖೆಗಳು ಹೊಂದಿದೆ. ನನ್ನ ವೈಯಕ್ತಿಕ ಮತ್ತು ವ್ಯವಹಾರದ ಎಲ್ಲಾ ಚಲಾವಣೆಗಳನ್ನು ಸದರಿ ಖಾತೆಗಳಿಂದಲೇ ಮಾಡುತ್ತೇನೆ ಎಂದರೆ ಸರಿ.

3. ಧನಂಜಯ ರೆಡ್ಡಿ ಎನ್ನುವವರ ಪರಿಚಯವಿದೆ. ಎರಡನೇ ಆರೋಪಿಯು ಧನಂಜಯ ರೆಡ್ಡಿರವರ ಸಹೋದರಿ ಎಂದರೆ ಸರಿ. ಧನಂಜಯ ರೆಡ್ಡಿಯವರ ಇನೊಂಬ್ಬ ಸಹೋದರಿ ಸುಜಾತ ಎನ್ನುವವರನ್ನು ನನ್ನ ಸಹೋದರನಾದ ಗೋವರ್ಧನ್‌ರವರಿಗೆ ಮದುವೆ ಮಾಡಿಕೊಂಡಿದ್ದೇವೆ ಎಂದರೆ ಸರಿ.

4. ನನ್ನ ಎರಡು ಖಾತೆಗಳಲ್ಲಿ ನೇಹ ಎಂಟರ್-ಪ್ರೈಸಸ್ಸ್ ಕಡೆಯಿಂದ ಯಾವಾಗಲೂ ವ್ಯವಹಾರಗಳು ನಡೆದಿರುವುದಿಲ್ಲ. ಆರೋಪಿತರಿಗೆ ಹಣ ನೀಡಿರುವ ಬಗ್ಗೆ ನಾನು ಯಾವುದೇ ಹಿಂಬರಹವನ್ನು ಅವರಿಂದ ಪಡೆದುಕೊಂಡಿರುವುದಿಲ್ಲ. ನನ್ನ ಹಾಗೂ ಆರೋಪಿತರ ನಡುವೆ ಹಣ ವ್ಯವಹಾರಕ್ಕೆ ಸಂಬಂಧಿಸಿದಂತೆ ಒಪ್ಪಂದ ಪತ್ರ ಅಥವ ಬರವಣಿಗೆ ಆಗಿರುವುದಿಲ್ಲ. ಹಣದ ಅವಶ್ಯಕತೆ ಇದೆ ಎಂದು ಆರೋಪಿತರು ನನಗೆ ಲಿಖಿತವಾಗಿ ಯಾವುದೇ ಮನವಿ ಮಾಡಿರುವುದಿಲ್ಲ.

5. ಸಾಮಾನ್ಯವಾಗಿ ಯಾವುದೇ ವ್ಯವಹಾರ ಮಾಡುವ ಸಂದರ್ಭದಲ್ಲಿ ನಾನು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ ನಂತರ ವ್ಯವಹಾರ ಮಾಡುತ್ತೇನೆ ಎಂದರೆ ಸರಿ. ಆದರೆ ಭೂದಾಖಲೆಗಳಿಗೆ ಮಾತ್ರ ಸಂಬಂಧಿಸಿದಂತೆ ದಾಖಲೆಗಳನ್ನು ನೋಡುತ್ತೇನೆ. ನಾನು ಹಣಕಾಸಿನ ವ್ಯವಹಾರ ಮಾಡುವಾಗ

ಅಲ್ಲಿಯವರೆಗೂ ಇರುವಂತಹ ದಾಖಲೆಗಳನ್ನು ನೋಡಿ ನಂತರ ವ್ಯವಹಾರ ಮಾಡುತ್ತೇನೆ ಎಂದರೆ ಸರಿ. ಹಾಗೆ ದಾಖಲೆಗಳು ಲಭ್ಯವಿಲ್ಲದೆ ಇದ್ದಾಗ ಸದರಿ ದಾಖಲೆಗಳನ್ನು ಹಾಜರುಪಡಿಸಲು ಕೇಳುತ್ತೇನೆ ಎಂದರೆ ಸರಿ. ಹಾಗೆ ವೈಯಕ್ತಿಕವಾಗಿ ಮತ್ತು ವ್ಯವಹಾರಿಕವಾಗಿ ಹಣಕಾಸು ಮತ್ತು ಭೂವ್ಯವಹಾರಕ್ಕೆ ಸಂಬಂಧಿಸಿದಂತೆ ವ್ಯವಹಾರ ಮಾಡುವಾಗ ಒಪ್ಪಂದ ಮತ್ತು ಕರಾರು ಪತ್ರಗಳನ್ನು ಮಾಡಿಸಿಕೊಳ್ಳುತ್ತೇವೆ ಎಂದರೆ ಸರಿ. ಆ ಸಂದರ್ಭದಲ್ಲಿ ಕ್ರಯ ಪತ್ರ, ಇಸಿ, ಕಂದಾಯ ಕಟ್ಟಿದ ದಾಖಲೆಗಳು ಹಾಗೂ ಇತರೆ ದಾಖಲೆಗಳನ್ನು ಪಡೆಯುತ್ತೇವೆ. ಆದರೆ ನಾನು ಹಣಕಾಸಿನ ವ್ಯವಹಾರ ಮಾಡಿರುವುದಿಲ್ಲ.

6. ಒಂದನೇ ಆರೋಪಿಯು 2013 ನೇ ಇಸ್ವಿಗೆ ಸಂಬಂಧಿಸಿದಂತೆ ಎಷ್ಟು ವ್ಯವಹಾರ ಮಾಡಿದ್ದಾರೆ ಎಂದು ನಾನು ದಾಖಲೆಗಳನ್ನು ಅವರಿಂದ ಪಡೆದುಕೊಂಡಿರುವುದಿಲ್ಲ. ಒಂದನೇ ಆರೋಪಿಯು ನವೆಂಬರ್ 2013 ರವರೆಗೆ ಎಷ್ಟು ವ್ಯವಹಾರ ಮಾಡಿದ್ದಾರೆ, ಎಷ್ಟು ಲಾಭಗಳಿಸಿದ್ದಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ದಿಃ26.11.2013 ರವರೆಗೆ ನನ್ನ ಖಾತೆಯಲ್ಲಿ 35 ಲಕ್ಷ ಮೊತ್ತವನ್ನು ನಾನು ಹಾಕಿರುವುದಿಲ್ಲ ಮತ್ತು ಹಣ ಬ್ಯಾಂಕಿನಿಂದ ಪಡೆದಿರುವುದಿಲ್ಲ. ನಾನು ಹಣ ನೀಡಿದ್ದರೆ ನಗದಾಗಿ ಅಥವ ಬೇರೆ ರೂಪದಲ್ಲಿ ಹಣ ನೀಡಿದ್ದೇನೆ ಎಂದು ತಿಳಿಸುತ್ತೇನೆ ಎಂದರೆ ಸರಿ. ನಾನು ಆರೋಪಿತರಿಗೆ ಮಾತ್ರ ನಗದಾಗಿ ಹಣ ನೀಡಿರುತ್ತೇನೆ. ಆರೋಪಿತರಿಗೆ ಹಣವನ್ನು ಹೇಗೆ ನೀಡಿದ್ದೇನೆ ಎಂದು ನನ್ನ ದೂರಿನಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ನಾನು ಹಣ ನೀಡಿದ್ದರೆ ಆರೋಪಿತರಿಗೆ ಯಾವ ರೀತಿಯಲ್ಲಿ ಹಣ ನೀಡಿದ್ದೆ ಎಂದು ತಿಳಿಸಿಬಹುದಾಗಿತ್ತು ಎಂದರ ಸರಿ.

7. ಧನಂಜಯ ರೆಡ್ಡಿರವರ ಜೊತೆ ನನಗೆ ಹಣಕಾಸಿನ ಮತ್ತು ಜಮೀನಿನ ವ್ಯವಹಾರಗಳು ಇದೆ ಎಂದರೆ ಸರಿ. ಸದರಿಯವರ ಜೊತೆ ವ್ಯವಹಾರವನ್ನು ದಾಖಲೆಗಳ ಮುಖಾಂತರವೆ ಮಾಡಿದ್ದೇನೆ ಎಂದರೆ ಸರಿ . ಧನಂಜಯ ರೆಡ್ಡಿಯವರ ಜೊತೆ ಜಮೀನಿನ ವ್ಯವಹಾರವನ್ನು ಮಾಡುವಾಗ ಒಪ್ಪಂದದ ಕರಾರು ಪತ್ರ ಮಾಡಿಕೊಂಡು, ಹಣ ಹಿಂದುರಿಗಿಸಿದಾಗ ಸದರಿ ಒಪ್ಪಂದ ಕರಾರು ಪತ್ರವನ್ನು ರದ್ದುಪಡಿಸಿದ್ದೇನೆ ಎಂದರೆ ಸರಿ. ಈಗ ನನಗೆ ದಿಃ23.12.2015 ರ ಕ್ರಯದ ಕರಾರು ಪತ್ರವನ್ನು ತೋರಿಸಿದ್ದು, ಅದನ್ನು ಒಪ್ಪಿಕೊಂಡ ಕಾರಣ ನಿಡಿಃ1 ಎಂದು ಗುರುತಿಸಲಾಯಿತು. ಶೀಲ ರಾಣಿ ಎಂದರೆ ನನ್ನ ಹೆಂಡತಿ. ಈಗ ನನಗೆ ದಿಃ23.12.2015 ರ ಮತ್ತೊಂದು

ಕ್ರಯದ ಕರಾರು ಪತ್ರವನ್ನು ತೋರಿಸಿದ್ದು ಸದರಿ ದಾಖಲೆ ಕ್ರಯದ ಕರಾರು ಪತ್ರವು ಧನಂಜಯ ರೆಡ್ಡಿ ಮತ್ತು ನನ್ನ ಹೆಂಡತಿಯ ನಡುವೆ ಆದಂತಹ ಕ್ರಯದ ಕರಾರು ಪತ್ರವೆಂದು ಒಪ್ಪಿಕೊಂಡ ಕಾರಣ ನಿಡಿಃ2 ಎಂದು ಗುರುತಿಸಲಾಯಿತು. ಅಲ್ಲದೆ ದಿಃ23.12.2015 ರ ಮತ್ತೊಂದು ಕ್ರಯದ ಕರಾರು ಪತ್ರವನ್ನು ತೋರಿಸಿದ್ದು ಸದರಿ ದಾಖಲೆಯು ನನ್ನ ಮತ್ತು ಧನಂಜಯ ರೆಡ್ಡಿರವರ ಮತ್ತು ಇರುವ ಕಾರಣ ನಿಡಿಃ3 ಎಂದು ಗುರುತಿಸಲಾಯಿತು. ಇದಲ್ಲದೆ ದಿಃ12.09.2018 ರಂದು ಮತ್ತು ದಿಃ24.04.2016 ರಂದು ಸದರಿ ಕ್ರಯದ ಕರಾರು ಪತ್ರಗಳನ್ನು ರದ್ದುಪಡಿಸಿದ ಬಗ್ಗೆ ಎರಡು ರದ್ದಪಿ ಪತ್ರಗಳನ್ನು ಮಾಡಿಕೊಂಡಿದ್ದೇನೆ ಎಂದು ನಾನು ಒಪ್ಪಿಕೊಂಡ ಕಾರಣ ಅವುಗಳನ್ನು ಕ್ರಮವಾಗಿ ನಿಡಿಃ4 ಮತ್ತು 5 ಎಂದು ಗುರುತಿಲಾಯಿತು. ಇದಲ್ಲದೆ ಧನಂಜಯ ರೆಡ್ಡಿರವರ ಜೊತೆ ಇನ್ನು ಒಂದು ಕ್ರಯಾದ ಕರಾರು ಪತ್ರದ ಬಗ್ಗೆ ಅರ್ಜಿಯು ಚಾಲತಿಯಲ್ಲಿದೆ ಎಂದರೆ ಸರಿ. ನಿಡಿಃ3 ಕ್ಕೆ ಸಂಬಂಧಿಸಿದಂತೆ ಕ್ರಯ ಪತ್ರ ಮಾಡಿಕೊಡಿ ಎಂದು ನಾನು ಧನಂಜಯ ರೆಡ್ಡಿಯವರನ್ನು ಇದುವರೆಗೂ ಕೇಳಿರುವುದಿಲ್ಲ ಎಂದರ ಸರಿ. ಈ ಎಲ್ಲಾ ವ್ಯವಹಾರಗಳನ್ನು ದಾಖಲೆಗಳ ಅದಾರದ ಮೇಲೆ ನಾನು **ಮಾಡಿಕೊಂಡಿರುವುದಿಲ್ಲ** ಎಂದರೆ ಸರಿಯಲ್ಲ. ನಂಬಿಕೆ ಆದಾರದ ಮೇಲೆ ಮಾಡಿದ್ದೇನೆ. ನಿಡಿಃ3 ರಲ್ಲಿ ನಮೂದಿಸಿರುವಂತೆ ನಾನು ಧನಂಜಯ ರಡ್ಡಿ ಯವರಿಗೆ ನೀಡಿದಂತಹ 20 ಲಕ್ಷ ಹಣವನ್ನು ಧನಂಜಯ ರೆಡ್ಡಿಯವರಿಗೆ ನಾನು ಬಡ್ಡಿಗಾಗಿ ನೀಡಿರುವುದಿಲ್ಲ. ಧನಂಜಯ ರೆಡ್ಡಿಯವರಿಗೆ 2 ಲಕ್ಷ ಹಣ ಬಾಕಿ ನೀಡಿ ಕ್ರಯ ಪತ್ರವನ್ನು ಮಾಡಿಸಿಕೊಳ್ಳಲು ಯಾವುದಾದರೂ ತೊಂದರೆ ಇತ್ತ ಎಂದರೆ ಸದರಿ ಜಮೀನಿನ ಮೇಲೆ ದಾವೆ ಇರುವ ಕಾರಣ ನಾವು ಮುಂದುವರೆದಿಲ್ಲ. ದಾವೆ ಇರುವ ಕಾರಣ ಸದರಿ ನಿಡಿಃ3 ನ್ನು ರದ್ದುಪಡಿಸಲು ನಾನು ಧನಂಜಯ ರೆಡ್ಡಿಯವರಿಗೆ ಲಿಖಿತವಾಗಿ ಯಾವುದೇ ನೋಟೀಸ್ ನೀಡಿಲ್ಲ. ಫೋನ್ ಮೂಲಕ ತಿಳಿಸಿದ್ದೇನೆ.

8. ಒಂದನೇ ಆರೋಪಿಗೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳನ್ನು ನೋಡಿಕೊಳ್ಳಲು ಮತ್ತು ಸಹಿ ಮಾಡಲು ಮೂರನೇ ಆರೋಪಿಗೆ ಮಾತ್ರ ಅಧಿಕಾರ ಇರುತ್ತದೆ ಎಂದರೆ ಸರಿಯಲ್ಲ. ಇಬ್ಬರು ಆರೋಪಿಗೂ ಸದರಿ ಅಧಿಕಾರ ಇರುತ್ತದೆ. 35 ಲಕ್ಷ ಹಣವನ್ನು ಯಾವ ಆರೋಪಿಗೆ ನೀಡಿದ್ದೇನೆ ಎಂದು ನಾನು ದೂರಿನಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ತಿಳಿಸಿಲ್ಲ ಎಂದರೆ ಸರಿ. ಆದರೆ ಹಣ ಪಡೆಯಲು ಇಬ್ಬರು ಬಂದಿದ್ದರು. ಸದರಿ ದಿನ ನನ್ನ ಬಳಿ 35 ಲಕ್ಷ ಹಣ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಅವಶ್ಯಕತೆ ಬಂದಲ್ಲಿ

ಕೊಡುತ್ತೇನೆ. ಈಗ ನನಗೆ ತೋರಿಸಿದ ದೇನಾ ಬ್ಯಾಂಕಿಗೆ ಸಂಬಂಧಿಸಿದ ಖಾತೆಯ ನಕಲನ್ನು ನಾನು ಗುರುತಿಸಿದ್ದು, ಸದರಿ ಖಾತೆಯ ನಕಲು ನಿಪಿ:2 ಚೆಕ್ಕಿಗೆ ಸಂಬಂಧಿಸಿದ್ದು ಎಂದು ಒಪ್ಪಿಕೊಂಡ ಕಾರಣ ಖಾತೆಯ ಸಂಖ್ಯೆ:98711023830 ಇದರ ಖಾತೆಯ ನಕಲನ್ನು ನಿಡಿ:6 ಎಂದು ಗುರುತಿಸಲಾಯಿತು. ಸದರಿ ಖಾತೆ ಆರೋಪಿಗೆ ಸಂಬಂಧಿಸಿರುತ್ತದೆ.

9. ಎರಡನೇ ಆರೋಪಿ ಓದಿದ್ದಾರೂ ಇಲ್ಲವೂ ಎಂದು ನನಗೆ ಮಾಹಿತಿ ಇಲ್ಲ. ನಿಪಿ:2 ನ್ನು ಬರೆಯಲು ನನಗಾಗಲಿ ಅಥವ ಎರಡನೇ ಆರೋಪಿಗಾಗಲೀ ಯಾವುದಾದರೂ ತೊಂದರೆ ಇತ್ತ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. ಎರಡನೇ ಆರೋಪಿಯೇ ಚೆಕ್ಕನ್ನು ನನಗೆ ನೀಡಿದ್ದಾರೆ. ನಿಡಿ:1 ದಾಖಲೆಯು 2006 ನೇ ಇಸ್ವಿಗೆ ಸಂಬಂಧಿಸಿದ್ದು ಎಂದರೆ ಸರಿ. ನಿಪಿ:1 ಕ್ಕೆ ಸಂಬಂಧಿಸಿದಂತೆ 2013 ನೇ ಸಾಲಿನವರೆಗೆ ಆರೋಪಿಯಿಂದ ಯಾವುದೇ ದಾಖಲೆಗಳನ್ನು ನಾನು ಪಡೆದಿರುವುದಿಲ್ಲ. ಸದರಿ ಸ್ವತ್ತನ್ನು ನನ್ನ ಹೆಸರಿಗೆ ಅಡಮಾನ ಮಾಡುತ್ತೇನೆ ಎಂದು ಆರೋಪಿತರು ತಿಳಿಸಿರುತ್ತಾರೆ. ದಿ:26.11.2013 ರಂದು ನಿಪಿ:1 ರಲ್ಲಿ ನಮಾದಿಸಿರುವ ಸ್ವತ್ತಿನ ಅಡಮಾನ ಮಾಡಿಸಿಕೊಳ್ಳಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಆದರೆ ತುರ್ತು ಇದ್ದ ಕಾರಣ ಅಡಮಾನ ಮಾಡಿಸಿಕೊಟ್ಟಿರುವುದಿಲ್ಲ. ದಿ:26.11.2013 ರ ನಂತರ ನವೆಂಬರ್ 2013 ರಲ್ಲಿ ಅಡಮಾನ ಪತ್ರ ಮಾಡಿಕೂಡಿ ಎಂದು ಆರೋಪಿತರಿಗೆ ಲಿಖಿತವಾಗಿ ಕೇಳಿರುವುದಿಲ್ಲ. ಅದರ ಬಾಯಿ ಮಾತಿನ ಮೂಲಕ ಕೇಳಿದ್ದೇನೆ. ನಿಪಿ:1 ಕ್ಕೆ ಸಂಬಂಧಿಸಿದಂತೆ ಮೂರು ವರ್ಷದಲ್ಲಿ ಅಡಮಾನ ಮಾಡಿಕೊಡುತ್ತೇನೆಂದು ಆರೋಪಿತರು ನನಗೆ ತಿಳಿಸಿದ್ದರು ಎಂದು ಹೇಳಿದ್ದು, ಅದರ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿ ಇರುವುದಿಲ್ಲ. ಅಡಮಾನ ಮಾಡಿಕೊಡುತ್ತೇನೆಂದು ಆರೋಪಿತರು ನನಗೆ ತಿಳಿಸಿದ್ದರ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿ ಇರುವುದಿಲ್ಲ. ದಿ:26.11.2013 ರಿಂದ ದಿ:25.11.2018 ರವರೆಗೆ ಈ ವ್ಯವಹಾರಕ್ಕೆ ಸಂಬಂಧಿಸಿದಂತೆ ಪತ್ರ ವ್ಯವಹಾರ ಮಾಡಿದ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿ ಇಲ್ಲ.

10. 2016 ರಲ್ಲಿ 6 ಲಕ್ಷ ಹಣ ಧನಂಜಯ ರೆಡ್ಡಿಯವರ ಖಾತೆಯಿಂದ ನನ್ನ ಖಾತೆಗೆ ಬಂದಿದ್ದು, ಸದರಿ ಹಣವನ್ನು ಧನಂಜಯ ರೆಡ್ಡಿಯವರು ನನ್ನಿಂದ ಪಡೆದಿದ್ದು, ನನಗೆ ಹಿಂದಿರುಗಿಸಿದ್ದಾರೆ. ಆರೋಪಿತರು ನನ್ನ ಬಳಿ ಯಾವುದೇ ಹಣಕಾಸಿನ ವ್ಯವಹಾರ ಮಾಡಿರುವುದಿಲ್ಲ ಮತ್ತು ನನ್ನ ಜೊತೆ ಯಾವುದೇ ವ್ಯವಹಾರ

ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಧನಂಜಯ ರೆಡ್ಡಿಯವರ ಜೊತೆ ಇಟ್ಟುಕೊಂಡಂತಹ ಹಣಕಾಸಿನ ವ್ಯವಹಾರದ ಭದ್ರತೆಗಾಗಿ ಎರಡನೇ ಆರೋಪಿಯಿಂದ ನಿಪಿಃ1 ಮತ್ತು 2 ನ್ನು ಭದ್ರತೆಗಾಗಿ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ನನ್ನ ಮತ್ತು ಧನಂಜಯ ರೆಡ್ಡಿಯವರ ನಡುವೆ ಇರುವ ಮತ್ತೊಂದು ವ್ಯವಹಾರಕ್ಕೆ ಸಂಬಂದಿಸಿದಂತೆ 2013 ರಲ್ಲಿ ಭದ್ರತೆಗಾಗಿ ಪಡೆದುಕೊಂಡಂತಹ ನಿಪಿಃ2 ನ್ನು ದುರುಪಯೋಗಪಡಿಸಿಕೊಂಡು ಅಕ್ರಮವಾಗಿ ಹಣ ಪಡೆಯುವ ಉದ್ದೇಶಕ್ಕಾಗಿ 2018 ರಲ್ಲಿ ನಿಪಿಃ2 ನ್ನು ಬ್ಯಾಂಕಿಗೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿಪಿಃ1 ಮತ್ತು 2 ಡರ ಹೊರತಾಗಿ ನನ್ನ ಬಳಿ ಬೇರೆ ಯಾವುದೇ ದಾಖಲೆಗಳು ಇರುವುದಿಲ್ಲ. ನಿಪಿಃ1 ರ ಮೂಲ ದಾಖಲೆ ನನ್ನ ಬಳಿ ಇದ್ದು, ನ್ಯಾಯಾಲಯಕ್ಕೆ ನೋಟರೀಕೃತ ನಕಲನ್ನು ಹಾಜರುಪಡಿಸಿದ್ದೇನೆ. ಸಾಮಾನ್ಯವಾಗಿ ನಾವು ನೀಡಿದ ಹಣಕ್ಕಿಂತ ಹೆಚ್ಚಿನ ಮೊತ್ತದ ದಾಖಲೆಗಳನ್ನು ಭದ್ರತೆಗಾಗಿ ಪಡೆಯುತ್ತೇವೆ ಎಂದರೆ ಸರಿ. ನಿಪಿಃ1 ರಲ್ಲಿ ನಮೂದು ಮಾಡಿರುವ ಸ್ವತ್ತಿನ ಮಾರುಕಟ್ಟೆ ಬೆಲೆ 3,40,000-00 ಎಂದರೆ ಸರಿಯಲ್ಲ. ಅದಕ್ಕಿಂತ ಹೆಚ್ಚಿನ ಬೆಲೆ ಇದೆ. ನಿಪಿಃ1 ಕ್ಕೆ ಧನಂಜಯ ರೆಡ್ಡಿಯವರೆ ಸಾಕ್ಷಿದಾರರು ಎಂದರೆ ಸರಿ.

11. ನಿಪಿಃ2 ಕ್ಕೆ ಹಿಂಬರಹವಾಗಿ ಚೆಕ್ ನಗದಿಕರಣ ತಡೆ ಹಿಡಿದಿದ್ದಾರೆ ಎಂದು ಹಿಂಬರಹ ನೀಡಿದ್ದಾರೆ ಎಂದರೆ ಸರಿ. ಸದರಿ ಚೆಕ್ಕನ್ನು ನಮ್ಮ ಕಂಪನಿಯ ವ್ಯವಹಾರಕ್ಕಾಗಿ ನೀಡಿರುವುದಿಲ್ಲ ಎಂದು ಮತ್ತು ಎರಡನೇ ಆರೋಪಿಯು ವೈಯಕ್ತಿಕ ವ್ಯವಹಾರಕ್ಕಾಗಿ ಚೆಕ್ಕನ್ನು ಉಪಯೋಗಿಸಿದ್ದಾರೆ ಎಂದು ಬ್ಯಾಂಕಿಗೆ ಮೂರನೇ ಆರೋಪಿ ಪತ್ರ ಬರೆದು ಚೆಕ್ಕನ್ನು ನಗದಿಕರಣಗೊಳಿಸದಂತೆ ತಡೆ ಹಿಡಿದಿರುವ ವಿಚಾರ ನನಗೆ ತಿಳಿದಿಲ್ಲ. ಒಂದುವೇಳೆ ಒಂದನೇ ಆರೋಪಿಯ ಜೊತೆಗೆ ನಾನು ವ್ಯವಹಾರ ಮಾಡಿದ್ದರೆ, ಸದರಿ ಕಂಪನಿಯ ಎಂ.ಡಿಯ ಸಹಿ ಪಡೆಯಲು ನನಗೆ ಯಾವುದೇ ತೊಂದರೆ ಇರಲಿಲ್ಲ. ಈಗ ನನಗೆ ಒಂದನೇ ಆರೋಪಿಗೆ ಸಂಬಂಧಿಸಿದ ಪಾರ್ಟನರ್ ಶಿಪ್ಪ್ ಫರ್ಮನ ಡೀಡ್ ಎಂದರೆ ಸರಿ. ಆದರೆ ನಕಲು ಪ್ರತಿಯಾಗಿರುವ ಕಾರಣ ಗುರುತಿಸಿರುವುದಿಲ್ಲ. ಒಂದನೇ ಆರೋಪಿಯ ಜೊತೆ ವ್ಯವಹಾರ ಮಾಡುವ ಪೂರ್ವದಲ್ಲಿ ನಾನು ಅದರ ಬಗ್ಗೆ ಎಲ್ಲಾ ಮಾಹಿತಿಗಳನ್ನು ಪಡೆದಿದ್ದೇನೆ.

<u>ಮಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೇಳಿದ್ದು, ನೀಡಲಾಯಿತು.</u>

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸ ಇದೆ.

5 ನೇ ಅಪರ ನ್ಯಾಯಾಧೀಶರು ಹಾಗೂ
24 ನೇ ಎಸಿಎಂಎಂ, ಬೆಂಗಳೂರು.